ಮೆಹಬೂಬ್ ನಗರ–ಗಿಣಿಗೆರಾ ರೈಲ್ವೆ ಯೋಜನೆ

1390(1342); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ಮಹಬೂಬ್‌ನಗರ – ಗಿಣಿಗೇರಾ ರೈಲ್ವೆ ಯೋಜನೆ ಯಾವಾಗ ಕೈಗೆತ್ತಿಕೊಳ್ಳಲಾಗಿದೆ;

ಆ) ಸದರಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು;

ಇ) ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಹಾಗೂ ಖರ್ಚಾಗದೇ ಉಳಿದಿರುವ ಹಣ ಎಷ್ಟು;

ಈ) ಈ ಯೋಜನೆಯ ನಿರ್ಮಾಣ ಕಾಮಗಾರಿಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ

ಉ) ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳ್ಳುವುದು; (ಸಂಪೂರ್ಣ ವಿವರ ನೀಡುವುದು)

ಶ್ರೀ ಆರ್. ರೋಷನ್ ಬೇಗ್ (ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು)

ಅ) 2007ರಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ರೂ. 225.00 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ. 175.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನ ಪೂರ್ಣವಾಗಿ ಖರ್ಚಾಗಿರುತ್ತದೆ. ಇಲ್ಲಿಯವರೆಗೆ ಒಟ್ಟು ರೂ. 380.00 ಕೋಟಿಗಳು ವೆಚ್ಚವಾಗಿದೆ.

ಈ) ನೈರುತ್ಯ ರೈಲ್ವೆಯಿಂದ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಉ) ಯೋಜನೆಯು ಪ್ರಗತಿಯಲ್ಲಿದ್ದು, ಈಗಾಗಲೇ ಗಿಣಿಗೇರಾ ಕಡೆಯಿಂದ 93 ಕಿ.ಮೀ. ಉದ್ದದ ಮಾರ್ಗಕ್ಕೆ ಅಗತ್ಯವಿರುವ 1095 ಎಕರೆ ಭೂಮಿಯನ್ನು ರಾಜ್ಯ ಸರ್ಕಾರವು ರೈಲ್ವೆಯ ಸ್ವಾಧೀನಕ್ಕೆ ನೀಡಿದೆ. 27 ಕಿ.ಮೀಗಳ ಉದ್ದದ ಮಾರ್ಗದಲ್ಲಿ ಭೂಕೆಲಸ (Earth Work) ಹಾಗೂ ಸಣ್ಣ ಪ್ರಮಾಣದ ಸೇತುವೆ ನಿರ್ಮಾಣ ಮುಕ್ತಾಯಗೊಂಡಿದೆ. ಗಿಣಿಗೇರಾ – ಬುದಗುಂಪ ನಡುವಿನ 14 ಕಿ.ಮೀ.ಗಳ ಮಾರ್ಗದಲ್ಲಿ ಇಂಜಿನ್ ರೋಲಿಂಗ್ ಮಾಡಲಾಗಿದ್ದು, ಈ ಯೋಜನೆಯನ್ನು ಪೂರ್ಣಗೊಳಿಸಲು, ತ್ವರಿತವಾಗಿ ಕ್ರಮವಹಿಸಲಾಗುತ್ತಿದೆ.

ಅಂಗವಿಕಲರಿಗೆ ಸೌಲಭ್ಯಗಳನ್ನು ಒದಗಿಸುವುದು

1392(2095); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ಅಂಗವಿಕಲರಿಗಾಗಿ ಸರ್ಕಾರದಿಂದ ಒದಗಿಸಿರುವ ಸೌಲಭ್ಯಗಳು ಯಾವುವು;

ಇ) ಅಂಗವಿಕಲರ ಓಡಾಟಕ್ಕೆ ಕಳೆದ 3 ವರ್ಷಗಳಲ್ಲಿ ಕಲ್ಪಿಸಲಾಗಿರುವ ತ್ರಿಚಕ್ರ ಸೈಕಲ್ ಮತ್ತು ತ್ರಿಚಕ್ರ ವಾಹನಗಳ ಸಂಖ್ಯೆ ಎಷ್ಟು;

ಈ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು;

ಉ) ಇವರುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಯಾವ ಸೌಲಭ್ಯಗಳನ್ನು ಎಷ್ಟು ಮಂದಿಗೆ ಯಾವ ಯೋಜನೆಗಳಲ್ಲಿ ಕಲ್ಪಿಸಲಾಗಿದೆ?